# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2430/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 6 .5.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:–** ಕುಣಿಗಲ್ ಪಟ್ಟಣದಲ್ಲಿರುವ ಲಯನ್ಸ್ ಎಂ.ಆರ್.ಬಿ. ಮೆಮೋರಿಯಲ್ ಶಾಲೆಯನ್ನು ಜನವಸತಿ ಪ್ರದೇಶದಿಂದ ಬೇರೆ ಕಡೆ ಸ್ಥಳಾಂತರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಎಸ್.ಆರ್.ಗಿರೀಶ್ ಚಂದ್ರ, ಕೆ.ಆರ್.ಎಸ್. ಅಗ್ರಹಾರ, ಕುಣಿಗಲ್, ತುಮಕೂರು ಜಿಲ್ಲೆ, (ಇನ್ನು ಮುಂದೆ “ದೂರುದಾರರು” ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಸಿದ್ದಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣದ ಕೆ.ಆರ್.ಎಸ್. ಅಗ್ರಹಾರ,2ನೇ ಅಡ್ಡರಸ್ತೆಯಲ್ಲಿರುವ ಲಯನ್ಸ್ ಎಂ.ಆರ್.ಬಿ.ಮೆಮೋರಿಯಲ್ ಶಾಲೆಯು ಎಲ್.ಕೆ.ಜಿ.ಯಿಂದ 10ನೇ ತರಗತಿಯವರೆಗೆ ನಡೆಯುತ್ತಿದ್ದು, ಆದರೆ ಇಲ್ಲಿ ಮಕ್ಕಳಿಗೆ ಅನುಕೂಲಕರವಾದ ಯಾವುದೇ ಪರಿಸರ ಇರುವುದಿಲ್ಲ. ಈ ಶಾಲೆಗೆ ಹೊಂದಿಕೊಂಡು ಅಕ್ಕಪಕ್ಕದಲ್ಲಿ ಮನೆಗಳಿರುವುದರಿಂದ ಮನೆಯಲ್ಲಿಯ ಹಿರಿಯ ನಾಗರಿಕರಿಗೆ ಶಾಲಾ ಮಕ್ಕಳ ಗಲಾಟೆಯಿಂದ, ಅಲ್ಲಿ ಬಳಸುವ ಧ್ವನಿವರ್ಧಕದಿಂದ ತುಂಬಾ ತೊಂದರೆಯಾಗುತ್ತಿದೆ. ಇಂತಹ ಸ್ಥಳದಲ್ಲಿ ಶಾಲೆ ನಡೆಯಲು ಶಿಕ್ಷಣ ಇಲಾಖೆಯು ಅನುಮತಿ ನೀಡಿದ್ದಲ್ಲದೆ, ಈ ಶಾಲೆಯನ್ನು ಸ್ಥಳಾಂತರಿಸುವ ಬಗ್ಗೆ ಎದುರುದಾರರಿಗೆ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದರೂ ಸಹಾ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸದರಿ ಶಾಲೆಯನ್ನು ಸ್ಥಳಾಂತರಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಲಯನ್ಸ್ ಎಂ.ಆರ್.ಬಿ.ಮೆಮೋರಿಯಲ್ ಶಾಲೆ ಕುಣಿಗಲ್,ಇದರ ಕಾರ್ಯದರ್ಶಿಗಳಿಗೆ ಮಕ್ಕಳಿಗೆ ಶಿಕ್ಷಣ ನೀಡಲು ಉತ್ತಮ ವಾತಾವರಣ ಕಲ್ಪಿಸುವಲ್ಲಿ ವಿಫಲವಾದ ಬಗ್ಗೆ ತಮ್ಮ ಹೇಳಿಕೆ ನೀಡಲು ತಿಳಿಸಲಾಗಿತ್ತು. ಅವರು ದಿ.25.10.2016ರಂದು ತಮ್ಮ ಹೇಳಿಕೆಯಲ್ಲಿ ದೂರಿನಲ್ಲಿಯ ಆಪಾದನೆಗಳನ್ನು ಅಲ್ಲಗಳೆದು ಕಳೆದ 17 ವರ್ಷಗಳಿಂದ ಶಾಲೆ ನಡೆಯುತ್ತಿದ್ದು, ಇದುವರೆಗೆ ಯಾವುದೇ ದೂರು ಬಂದಿರುವುದಿಲ್ಲ, ಆದರೆ ಬೇರೆ ಶಾಲಾ ಕಾಲೇಜುಗಳಿಗೆ ಅನ್ವಯಿಸದ ನಿಯಮ ತಮ್ಮ ಶಿಕ್ಷಣ ಸಂಸ್ಥೆಗೆ ಏಕೆ ಅಂತ ಹಾಗೂ ಮುಂದಿನ ಅನಾಹುತಗಳಿಗೆ ಎದುರುದಾರರೇ ಜವಾಬ್ದಾರರು ಅಂತ ವರದಿ ಸಲ್ಲಿಸಿರುತ್ತಾರೆ.

4. ಈ ದೂರಿನಲ್ಲಿಯ ಅಂಶಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಿ ವರದಿ ನೀಡಲು ಶ್ರೀ ರಂಗರಾಜು, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಶೆಟ್ಟಿಗೆರೆ, ಅವರನ್ನು ನೇಮಿಸಲಾಗಿತ್ತು. ಅವರು ಶಾಲೆಯನ್ನು ಕೂಲಂಕುಷ ಪರಿಶೀಲಿಸಿ, ಶಾಲೆಯಲ್ಲಿ ಬಳಸುವ ಧ್ವನಿವರ್ದಕದಿಂದ ಮಾನಸಿಕವಾಗಿ ತೊಂದರೆಯುಂಟಾಗುತ್ತದೆ ಮತ್ತು ಶಾಲೆಯ ಹೊರಗೆ ಮಕ್ಕಳಿಗೆ ಉತ್ತಮ ಪರಿಸರವಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಆದ್ದರಿಂದ ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು, ಕಾರಣ ಪ್ರಕರಣ ಮುಕ್ತಾಯಗೊಳಿಸಲು ಕೋರಿರುತ್ತಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ಈ ಶಾಲಾ ಕಟ್ಟಡದ ಫೋಟೋಗಳನ್ನು ಸಲ್ಲಿಸಿದ್ದು, ಅವುಗಳನ್ನು ಪರಿಶೀಲಿಸಿದಾಗ ಸದರಿ ಶಾಲೆಯು ಜನವಸತಿ ಇರುವ ಬಡಾವಣೆಯಲ್ಲಿ ಇದೆಯೆಂದು ಕಂಡುಬರುತ್ತದೆ. ಶ್ರೀ ರಂಗರಾಜು ಅವರು ಈ ಬಗ್ಗೆ ವರದಿ ನೀಡಿದ್ದು, ಅದನ್ನು ಪರಿಶೀಲಿಸಿದಾಗ ಶಾಲಾ ಕಟ್ಟಡವು ಚಿಕ್ಕದಾಗಿದ್ದು, ಮಕ್ಕಳಿಗೆ ಹೊರಾಂಗಣ ಆಟವಾಡಲು ಉತ್ತಮ ಪರಿಸರದ ಕೊರತೆಯಿದೆ, ಶಾಲೆಯ ಸ್ವಂತ ಕಟ್ಟಡದ 3 ಕಡೆ ಜನರು ವಾಸಿಸುವ ವಸತಿ ಗೃಹಗಳು ಇರುತ್ತವೆ. ಶಾಲೆಯಲ್ಲಿ ಕಾರ್ಯಕ್ರಮಗಳಿಗೆ ಧ್ವನಿವರ್ಧಕ ಬಳಸುವುದರಿಂದ ಅಕ್ಕಪಕ್ಕದವರಿಗೆ ತೊಂದರೆಯಾಗುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ.

6. ಲಯನ್ಸ್ ಎಂ.ಆರ್.ಬಿ.ಮೆಮೋರಿಯಲ್ ಶಾಲೆ, ಕುಣಿಗಲ್, ಇದು ಕಳೆದ 17 ವರ್ಷಗಳಿಂದ ಶಿಕ್ಷಣ ನೀಡುತ್ತಾ ಬಂದಿದ್ದು, ಆದರೆ ಇತ್ತೀಚೆಗೆ ಪಟ್ಟಣ ಬೆಳೆದಂತೆಲ್ಲ, ಈ ಶಾಲೆಗೆ ಕಟ್ಟಡವು ಚಿಕ್ಕದಾಗಿದ್ದು, ಅಕ್ಕಪಕ್ಕದಲ್ಲಿ

ವಸತಿ ಗೃಹಗಳು ನಿರ್ಮಾಣಗೊಂಡಿರುತ್ತವೆ. ಶಾಲಾ ಪ್ರದೇಶ ಚಿಕ್ಕದಾಗಿರುವುದರಿಂದ ಮಕ್ಕಳಿಗೆ ಹೊರಾಂಗಣ ಆಟವಾಡಲು ಸ್ಥಳದ ಕೊರತೆ ಇರುವುದು ಕಂಡುಬರುತ್ತದೆ. ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ಮಕ್ಕಳಿಗೆ ಒಳಾಂಗಣ ಹಾಗೂ ಹೊರಾಂಗಣ ಶಿಕ್ಷಣ ಎರಡೂ ಮುಖ್ಯವಾಗಿದ್ದು, ಪೂರಕ ವಾತಾವರಣ ನಿರ್ಮಿಸುವುದು ಶಾಲಾ ಮಂಡಳಿಯ ಕರ್ತವ್ಯವಾಗಿರುತ್ತದೆ. ಆದರೆ ಶಾಲೆ 17 ವರ್ಷಗಳ ಹಿಂದೆ ಪ್ರಾರಂಭವಾಗಿರುವುದರಿಂದ ಇದಕ್ಕೆ ಅನುಮತಿ ನೀಡಲು ಎದುರುದಾರರ ಪಾತ್ರ ಇರುವುದು ಕಂಡುಬರುವುದಿಲ್ಲ. ಆದರೆ ಸದರಿ ಶಾಲೆಯನ್ನು ಈ ಜನವಸತಿ ಪ್ರದೇಶದಿಂದ ಬೇರೆ ಕಡೆ ಸ್ಥಳಾಂತರಿಸುವುದು ಸೂಕ್ತವೆನಿಸುತ್ತದೆ.

7. ಎದುರುದಾರರು ಈಗಾಗಲೇ ಈ ಸಂಸ್ಥೆಯ ಕಾರ್ಯದರ್ಶಿಗಳಿಗೆ ಈ ಬಗ್ಗೆ ಸಮಜಾಯಿಷಿ ಕೇಳಿದಾಗ ಹೆಚ್ಚಾಗಿ ಎಲ್ಲಾ ಶಾಲಾ ಕಾಲೇಜುಗಳು ಜನವಸತಿ ಪ್ರದೇಶದಲ್ಲಿರುವುದರಿಂದ ಅವರಿಗೆ ಅನ್ವಯಿಸದ ನಿಯಮ ತಮಗೇಕೆ ಅನ್ವಯಿಸಬೇಕು ಅಂತ ಹಾಗೂ ಈ ಬಗ್ಗೆ ತಾವು ಪ್ರತ್ಯುತ್ತರ ನೀಡಲು ಸಿದ್ಧವಿರುವುದಾಗಿ ತಿಳಿಸಿರುತ್ತಾರೆ. ಆದರೆ ಈ ಸಂಸ್ಥೆಯ ವಿರುದ್ಧ ದೂರು ಬಂದಿರುವುದರಿಂದ ಕಾನೂನುಪ್ರಕಾರ ತಮ್ಮ ಸಂಸ್ಥೆಯನ್ನು ಇಟ್ಟುಕೊಳ್ಳಬೇಕಾಗಿದ್ದು, ಶಾಲಾ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದ್ದು, ಅದನ್ನು ಉಲ್ಲಂಘಿಸಿದರೆ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ. ಈ ಪ್ರದೇಶದ ನಿವಾಸಿಗಳ ತೊಂದರೆ ತಪ್ಪಿಸಲು ಹಾಗೂ ಮಕ್ಕಳಿಗೆ ಉತ್ತಮ ಪರಿಸರ ಒದಗಿಸಲು ಕಾನೂನುಪ್ರಕಾರ ಶಾಲೆಯನ್ನು ಬೇರೆ ಕಡೆ ಸ್ಥಳಾಂತರಿಸುವುದು ಸೂಕ್ತವೆನಿಸುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಕುಣಿಗಲ್ ಪಟ್ಟಣದಲ್ಲಿರುವ ಲಯನ್ಸ್ ಎಂ.ಆರ್.ಬಿ.ಮೆಮೋರಿಯಲ್ ಶಾಲೆಯನ್ನು ಜನವಸತಿ ಪ್ರದೇಶದಿಂದ ಬೇರೆ ಕಡೆ ಸ್ಥಳಾಂತರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**